**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**

**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಎಸ್.ಸಿ.87/2022</u>**

**ದಿನಾಂಕಃ 15.07.2025**

**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 9 (ಚಾ.ಸಾ. 7)**

| | | |
|---|---|---|
| **ಹೆಸರು** | **ಃ** | **ಪ್ರಕಾಶ್** |
| **ತಂದೆಯ ಹೆಸರು** | **ಃ** | **ಶಿವಣ್ಣ** |
| **ವಯಸ್ಸು** | **ಃ** | **40 ವರ್ಷ** |
| **ಉದ್ಯೋಗ** | **ಃ** | **ವ್ಯವಸಾಯ** |
| **ವಾಸ ಸ್ಥಳ** | **ಃ** | **ಕರೀಕಲ್ಲು ದೊಡ್ಡಿ.** |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಆರೋಪಿ, ಅವರ ಹೆಂಡತಿ ಸೌಮ್ಯ ಮತ್ತು ಅವರ ತಾಯಿ ಕಮಲಮ್ಮ ಗೊತ್ತು. ಆರೋಪಿ ಏನು ಕೆಲಸ ಮಾಡುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆರೋಪಿ ಅವರ ಹೆಂಡತಿ ಮತ್ತು ತಾಯಿಯನ್ನು ಚೆನ್ನಾಗಿ ನೋಡಿ ಕೊಳ್ಳುತ್ತಿದ್ದನು. ಆರೋಪಿಯ ಹೆಂಡತಿ ಮತ್ತು ತಾಯಿ ಆರೋಪಿಯ ಮೇಲೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಯಾವುದೇ ಬುದ್ದಿವಾದವನ್ನು ಹೇಳಿಲ್ಲ. ಆರೋಪಿಯ ಹೆಂಡತಿ ಮತ್ತು ತಾಯಿಗೆ ಗಾಯವಾದ ಬಗ್ಗೆ ಮತ್ತು ಅವರಿಬ್ಬರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯ ಹೆಂಡತಿ ಮತ್ತು ತಾಯಿ ಆರೋಪಿಯ ಮೇಲೆ ದೂರು ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಆರೋಪಿ ಅವರ ಹೆಂಡತಿಗೆ ಹೊಡೆದು ಸಾಯಿಸಲು ಪ್ರಯತ್ನ ಪಟ್ಟಿದ್ದರು ಎಂದು ಹೇಳಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

**2.** ನಾನು ನನ್ನ ಹೇಳಿಕೆಯಲ್ಲಿ ಆರೋಪಿ ಪ್ರತಿ ದಿವಸ ಕುಡಿದು ಬಂದು ಅವರ ಹೆಂಡತಿ ಮತ್ತು ತಾಯಿಯ ಜೊತೆ ಜಗಳ ಮಾಡುತ್ತಿದ್ದರು, ಆರೋಪಿ ಟೊಯೇಟಾ ಕೆಲಸಕ್ಕೆ ಹೋಗುವುದನ್ನು ಬಿಟ್ಟು ಮನೆಯ ಬಳಿ ಇರುತ್ತಿದ್ದರು ಮತ್ತು ಕುಡಿಯಲು ಹಣ ಬೇಕು ಎಂದು ಹೆಂಡತಿ ಮತ್ತು ತಾಯಿಗೆ ಪೀಡಿಸಿ ಹೊಡೆದು, ಬೈದು ಗಲಾಟೆ ಮಾಡಿದ್ದರು, ಆರೋಪಿ ಅವರ ಹೆಂಡತಿಗೆ ಮದುವೆ ಸಮಯದಲ್ಲಿ ನಿನ್ನ ತಂದೆ ಹೆಚ್ಚಿನ ವರದಕ್ಷಿಣೆ ಹಣ ಕೊಟ್ಟಿಲ್ಲ, ನೀನು ನಿನ್ನ ತಂದೆ ಮನೆಯಿಂದ ಹಣ ತಂದು ಕೊಡು ಎಂದು ಪೀಡಿಸಿ ಬೈದು, ಹೊಡೆದು ಗಲಾಟೆ ಮಾಡುತ್ತಿದ್ದರು ಎಂದು ಹೇಳಿದ್ದೇನೆ ಅಂದರೆ ಸರಿಯಲ್ಲ.

**3.** ನಾನು ಆಗಾಗ ಆರೋಪಿಯ ಮನೆಗೆ ಹೋಗಿ ಆರೋಪಿಗೆ ಬುದ್ದಿ ಹೇಳುತ್ತಿದ್ದೆನು ಅಂದರೆ ಸರಿಯಲ್ಲ. ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಒಂದು ದಿನ ಆರೋಪಿ ಕುಡಿಯಲು ಹಣ ಬೇಕು ಹಣ ಕೊಡು ಎಂದು ಸೌಮ್ಯಳನ್ನು ಕೇಳಿದ್ದು, ಅವಳು ಹಣ ಇಲ್ಲವೆಂದು ಹೇಳಿದ್ದಕ್ಕೆ ಆರೋಪಿ ಅವಳೊಂದಿಗೆ ಜೋರಾಗಿ ಜಗಳ ಮಾಡುತ್ತಿದ್ದನು, ಆಗ ನಾನು ಅವರ ಮನೆಯ ಬಳಿ ಹೋಗುವಷ್ಟರಲ್ಲಿ ಚಾಕುವಿನಿಂದ ಸೌಮ್ಯಳ ಕುತ್ತಿಗೆಯ ಮುಂಭಾಗದಲ್ಲಿ ಕೊಯ್ದಿದ್ದರಿಂದ ಸೌಮ್ಯಳ ಕುತ್ತಿಗೆಯಿಂದ ರಕ್ತ ಬರುತ್ತಿತ್ತು, ಅಷ್ಟರಲ್ಲಿ ಉಮಾ ಅಲ್ಲಿಗೆ ಬಂದಿದ್ದು, ಸೌಮ್ಯಳ ಕುತ್ತಿಗೆಯಿಂದ ರಕ್ತ ಬರದಂತೆ ತಡೆದು ಹಾರೈಕೆ ಮಾಡಿ ಅಲ್ಲಿಗೆ ಬಂದ ಅಕ್ಕಪಕ್ಕದ ಜನರು ಸೌಮ್ಯ ಮತ್ತು ಅವರ ಅತ್ತೆ ಕಮಲಮ್ಮನವರಿಗೆ ಪೊಲೀಸ್ ಠಾಣೆಗೆ ಹೋಗಿ ಆರೋಪಿ ವಿರುದ್ದ ದೂರು ನೀಡುವಂತೆ ತಿಳಿಸಿದ್ದರೂ ಸಹ ಅವರಿಬ್ಬರೂ ದೂರು ನೀಡಿರುವುದಿಲ್ಲ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಇದಾದ ಕೆಲವು ದಿನಗಳಲ್ಲಿ ಮತ್ತೆ ಆರೋಪಿ ಅವರ ಹೆಂಡತಿ ಮತ್ತು ತಾಯಿಗೆ ಹಣ ಕೊಡು ಎಂದು ಪೀಡಿಸಿ ಕೈಗಳಿಂದ ದೊಣ್ಣೆಯಿಂದ ಹೊಡೆದು ಕಿರುಕುಳ ನೀಡುತ್ತಿದ್ದುದರಿಂದ ಆತನ ಹಿಂಸೆಯನ್ನು ತಾಳಲಾರದೇ ಸೌಮ್ಯ ಗಿಡಕ್ಕೆ ಹೊಡೆಯುವ ಔಷಧಿಯನ್ನು ಕುಡಿದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಳು ಎಂದು ನಾನು ಪೊಲೀಸರ ಮುಂದೆ ಹೇಳಿದ್ದೇನೆ ಅಂದರೆ ಸರಿಯಲ್ಲ. ಆಗ ಜಯಲಕ್ಷ್ಮಮ್ಮ ಮತ್ತು ಉಮಾ ರವರು ಸೌಮ್ಯಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನಾನು ಪೊಲೀಸರ ಮುಂದೆ ಹೇಳಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಅವರ ತಾಯಿ ಕಮಲಮ್ಮನವರಿಗೆ ದೊಣ್ಣೆಯಿಂದ ಹೊಡೆದು, ಕೈಯಿಂದ ಮುಖದ ಭಾಗಕ್ಕೆ ಹೊಡೆದಿದ್ದು, ಇದರಿಂದ ಆರೋಪಿ ತಾಯಿಯ ಮೂರು ಹಲ್ಲುಗಳು ಮುರಿದಿದ್ದವು ಎಂದು ನಾನು ಪೊಲೀಸರ ಮುಂದೆ ಹೇಳಿದ್ದೇನೆ ಅಂದರೆ ಸರಿಯಲ್ಲ.

**4.** ಇದಾದ ನಂತರ ಸೌಮ್ಯಳನ್ನು ಮನೆಗೆ ಕರೆದುಕೊಂಡು ಬಂದಿದ್ದು ಮತ್ತೆ ಆರೋಪಿ ಹೆಂಡತಿ ಮತ್ತು ತಾಯಿಗೆ ತೊಂದರೆ ನೀಡುತ್ತಿದ್ದುದರಿಂದ ಸೌಮ್ಯ ಬಿಡದಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಅಲ್ಲಿ ಆರೋಪಿಯು ಅವರ ಹೆಂಡತಿ ಮತ್ತು ತಾಯಿಗೆ ತೊಂದರೆ ನೀಡುವುದಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ ಎಂದು ನಾನು ಪೊಲೀಸರ ಮುಂದೆ ಹೇಳಿದ್ದೇನೆ ಅಂದರೆ ಸರಿಯಲ್ಲ. ಇದಾದ

ನಂತರ ಆರೋಪಿ ಅವರ ಹೆಂಡತಿಯನ್ನು ಹಣ ಕೊಡುವಂತೆ ಕೇಳಿದ್ದು, ಹಣ ಕೊಡದಿದ್ದಾಗ ಹಾಸಿಗೆ ಮತ್ತು ತಲೆದಿಂಬುಗಳಿಗೆ ಬೆಂಕಿ ಹೊತ್ತಿಸಿದ್ದು ಆಗ ಅಕ್ಕಪಕ್ಕದವರು ಬಂದು ನೀರು ಹಾಕಿ ಬೆಂಕಿಯನ್ನು ಹಾರಿಸಿ ಆರೋಪಿಗೆ ಬೈದು ಹೋದರು ಎಂದು ನಾನು ಪೊಲೀಸರ ಮುಂದೆ ಹೇಳಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಆತನ ತಾಯಿ ಮತ್ತು ಹೆಂಡತಿಯ ಒಡವೆಗಳನ್ನು ಅಡವಿಟ್ಟುಕೊಂಡು ಕುಡಿಯಲು ಬಳಸಿಕೊಂಡಿದ್ದು, ಈ ವಿಚಾರವಾಗಿ ಕೇಳಿದ್ದಕ್ಕೆ ಆತನ ತಾಯಿ ಕಮಲಮ್ಮನವರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ಸೌಮ್ಯಳಿಗೆ ನೀನು ಮನೆ ಬಿಟ್ಟು ಹೋಗು ಇಲ್ಲದಿದ್ದರೆ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದನು ಎಂದು ನಾನು ಪೊಲೀಸರ ಮುಂದೆ ಹೇಳಿದ್ದೇನೆ ಅಂದರೆ ಸರಿಯಲ್ಲ.

**5.** ದಿನಾಂಕಃ **20.04.2022** ರಂದು ಬೆಳಿಗ್ಗೆ **9.00** ಗಂಟೆಯಲ್ಲಿ ನಾನು ಕೆಲಸಕ್ಕೆಂದು ತೋಟದ ಕಡೆ ಹೋಗುತ್ತಿದ್ದ ಸಮಯದಲ್ಲಿ ಆರೋಪಿ ಅವರ ಹೆಂಡತಿ ಮತ್ತು ತಾಯಿಯನ್ನು ಹಣ ಕೊಡುವಂತೆ ಕೇಳುತ್ತಿದ್ದು, ಅವರು ಇಲ್ಲ ಎಂದಾಗ ಅವರ ತಾಯಿಯನ್ನು ಕೆಳಕ್ಕೆ ಕೆಡವಿ ಎದೆಯ ಮೇಲೆ ಕಾಲಿಟ್ಟು ಸಾಯಿಸುತ್ತೇನೆಂದು ಮತ್ತು ಸೌಮ್ಯಳ ಕುತ್ತಿಗೆಯನ್ನು ಹಿಸುಕಿ ಸಾಯಿಸಲು ಪ್ರಯತ್ನಿಸಿದ್ದು ಅಷ್ಟರಲ್ಲಿ ನಾವೆಲ್ಲ ಹೋಗಿ ಆರೋಪಿಯಿಂದ ಸೌಮ್ಯಳನ್ನು ಬಿಡಿಸಿ, ಅವರ ತಾಯಿಗೆ ಸಮಾಧಾನ ಮಾಡಿದೆವು ಅಂದರೆ ಸರಿಯಲ್ಲ. ಆರೋಪಿ ಹೆಂಡತಿಗೆ ಹಿಂಸೆ ಕೊಟ್ಟು ಕೊಲೆ ಮಾಡಿ ಸಾಯಿಸಲು ಪ್ರಯತ್ನ ಪಟ್ಟ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು **ನಿಪಿ 15** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ರಾಮನಗರ.**